ಸಾಕ್ಷಿಗೆ ದಿನಾಂಕಃ **26.06.2024** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರಃ ಶ್ರೀ. ಹೆಚ್ ಎ ಎಸ್ ವಕೀಲರಿಂದ ಃ</u>

ದಿನಾಂಕಃ 08.11.1979 ರಂದು ಮಹಮ್ಮದ್ ಗೌಸ್ ರವರು ಕಣ್ಣಪ್ಪ ಗೌಂಡರ್ ರವರಿಗೆ ಮಾಡಿಕೊಟ್ಟ ಕ್ರಯಪತ್ರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರತಿವಾದಿ 2 ರಿಂದ 5 ರವರು ನನಗೆ ಗೊತ್ತಿರುವುದಿಲ್ಲ. ಸದರಿ ದಿನಾಂಕಃ 08.11.1979 ರ ಕ್ರಯಪತ್ರದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಈ ಸಂಬಂಧ ನಾನು ಯಾವುದೇ ಪರಿಹಾರ ಕೋರಿರುವುದಿಲ್ಲ. ಯಾವುದೇ ಪರಿಹಾರ ಕೋರಿ ನಾನು ಯಾವುದೇ ದಾವೆ ತಂದಿರುವುದಿಲ್ಲ. ವ್ಯಾಜ್ಯದ ಕಾರಣ ದಿನಾಂಕ ನನಗೆ ಗೊತ್ತಿರುವುದಿಲ್ಲ.

ಸರ್ವೆ ನಂಃ 118 ರಲ್ಲಿ ಎಷ್ಟು ವಿಸ್ತೀರ್ಣ ಇದೆ ಮತ್ತು ಯಾರು ಯಾರು ಸ್ವಾಧೀನ ಇರುತ್ತಾರೆ ಎಂದು ನನಗೆ ಗೊತ್ತು ಒಟ್ಟು 5 ಜನ ಎಂದು ನುಡಿಯುತ್ತಾರೆ. ಸದರಿ 5 ಜನ ಪಕೀರಪ್ಪ, ಸುರೇಶ, ಗಣೇಶ, ರಂಗಸ್ವಾಮಿ, ಮಂಜುನಾಥ ಆಗಿರುತ್ತಾರೆ. ನಿಪಿ-6 ಸರ್ವೆ ಸ್ಕೆಚ್ ಪ್ರಕಾರ ಎಷ್ಟು ಜನ ಸ್ವಾಧೀನ ಇರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಃ 118 ರಲ್ಲಿ ನ ರಾ ಪುರದಿಂದ ಹೆಬ್ಬೆಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಬರುತ್ತದೆ ಎಂದರೆ ಸರಿ. ಸರ್ವೆ ನಂಃ 118 ರಲ್ಲಿ 1 ಎಕರೆ 26 ಗುಂಟೆ ಇದ್ದು ಯಾವುದೇ ಮನೆಗಳು ಇರುವುದಿಲ್ಲ ಖಾಲಿ ಇರುತ್ತದೆ. ಸದರಿ ಖಾಲಿ ಜಾಗದಲ್ಲಿ ಬರಡು ಭೂಮಿಯಾಗಿದ್ದು, ಪೂರ್ತಿಯಾಗಿ ಖಾಲಿ ಇರುತ್ತದೆ.

ದಾವೆಯಲ್ಲಿ ಏನನ್ನು ದಾವಾ ಆಸ್ತಿಯಾಗಿ ತೋರಿಸಿರುತ್ತೇನೆ ಎಂದು ನನಗೆ ಗೊತ್ತಿದೆ. ದಾವಾ ಆಸ್ತಿಯನ್ನು 1 ಎಕರೆ 26 ಗುಂಟೆ ಖಾಲಿ ಜಾಗ ಎಂದು ತೋರಿಸಿರುತ್ತೇನೆ. ಸದರಿ ಜಾಗದ ಚೆಕ್ಕುಬಂಧಿ ಪೂರ್ವಕ್ಕೆ ಗಣೇಶ್ ರವರ ಜಾಗ, ಪಶ್ಚಿಮಕ್ಕೆ ಬಾಷಾರ ಸಾಬ್ ರವರ ಜಾಗ, ಉತ್ತರಕ್ಕೆ ಹೆಬ್ಬೆ ರಸ್ತೆ, ದಕ್ಷಿಣಕ್ಕೆ ಮಂಜುನಾಥ್ ರಾಜೇಶ್ವರಿರವರ ಮನೆ ಬರುತ್ತದೆ. ಸದರಿ ಪಶ್ಚಿಮಕ್ಕೆ ಬಾಷಾ ಸಾಬ್ ರವರ ಜಾಗದಲ್ಲಿ ಮನೆ ಇರುತ್ತದೆ. ಬಾಷಾ ಸಾಬ್ ರವರು ಇರುವ ಜಾಗದ ಸರ್ವೆ ನಂಃ 119 ಆಗಿರುತ್ತದೆ. ಸರ್ವೆ ನಂಃ 119 ರವಿಶಂಕರ್ ರವರಿಗೆ ಸಂಬಂಧಪಟ್ಟ ಜಾಗ ಆಗಿರುತ್ತದೆ. ನಾನು ದಾವೆಯಲ್ಲಿ ತೋರಿಸಿರುವ ದಾವಾ ಆಸ್ತಿಯಲ್ಲಿರುವ ಸರ್ವೆ ನಂಃ

118 ರಲ್ಲಿ 1 ಎಕರೆ 26 ಗುಂಟೆಗೆ ನಾನು ಮಾಲೀಕನಾಗಿರುವುದಿಲ್ಲ ಎಂದರೆ ಸಾಕ್ಷಿ ನಾವು ಇದ್ದೇವೆಂದು ನುಡಿಯುತ್ತಾರೆ.

ಪ್ರಸ್ತುತ ದಾವೆಯಲ್ಲಿ ನಾನು ಯಾವುದೇ ವಾದಕಾರಣ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ದಾವೆಯು ಕಾಲಪರಿಮಿತಿಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಃಃ ಮರು ವಿಚಾರಣೆ ಇಲ್ಲಃಃ**

**(ದಿನಾಂಕಃ 26.06.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ